**ಸಾಕ್ಷಿಗೆ ದಿನಾಂಕಃ17-09-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ವಾದಿ ಪರ ಶ್ರೀ.KLR ವಕೀಲರಿಂದ ::**

1 ನೇ ವಾದಿ ಚಂದ್ರಪ್ಪ ರವರ ಕುಟುಂಬಸ್ಥರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಂದ್ರಪ್ಪ ಹಾಗೂ ಅವರ ಸಹೋದರರ ನಡುವೆ ವಿಭಾಗ ಆಗಿರುವ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ವಿಭಾಗ ಪತ್ರದಲ್ಲಿ ದಾವಾ ಆಸ್ತಿಯು ಅವರ ಕುಟುಂಬಕ್ಕೆ ಯಾವ ಮುಖಾಂತರ ಬಂದಿರುತ್ತದೆ ಎಂದು ಬರೆದಿರುತ್ತದೆಯೇ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಚಂದ್ರಪ್ಪ ರವರ ಕುಟುಂಬದಲ್ಲಿ ಎಷ್ಟು ವಿಭಾಗ ಪತ್ರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಾವ ವಿಭಾಗ ಪತ್ರದ ಅಡಿಯಲ್ಲಿ ಯಾರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು 2010 ನೇ ಸಾಲಿನಲ್ಲಿ ಆದ ವಿಭಾಗ ಪತ್ರದ ಅಡಿ ವನಜಾಕ್ಷಮ್ಮ ಎನ್ನುವವರ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಕ್ರಯಪತ್ರವನ್ನು ತಯಾರಿಸಲು ವಿಷಯವನ್ನು ಬಿಕ್ಕಲಂದಾರರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ತಯಾರಾಗುವಾಗ ಯಾರೆಲ್ಲಾ ವ್ಯಕ್ತಿಗಳು ಇದ್ದರು ಎಂದರೆ ಸಾಕ್ಷಿಯು ನಾನು, ವನಜಮ್ಮ, ವನಜಮ್ಮರವರ ಮಕ್ಕಳು, ವನಜಮ್ಮ ರವರ ಗಂಡ ರವರು ಇದ್ದರು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಲ್ಲಿ ಏನೆಲ್ಲಾ ವಿಚಾರಗಳು ಬರೆದಿರುತ್ತದು ಎಂದು ನಾನು ಆ ಸಮಯದಲ್ಲಿ ಓದಿ ತಿಳಿದುಕೊಂಡಿರಲಿಲ್ಲ. ವಾದಿಗಳಿಗೆ ತಿಳಿಸದೇ ಮತ್ತು ಅವರ ಬೆನ್ನ ಹಿಂದೆ ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯಪತ್ರವನ್ನು ನಾನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿಗೆ ಎಷ್ಟು ಜನ ಮೂಲ ಹಕ್ಕುದಾರರು ಇರುತ್ತಾರೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ವಿಭಾಗ ಪತ್ರ ಮತ್ತು ಕ್ರಯಪತ್ರದ ಅಡಿಯಲ್ಲಿ ಇರುವ ಜಾಗಗಳು ಚಂದ್ರಪ್ಪ ರವರ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನನಗೂ ಹಾಗೂ ಇತರೇ ಪ್ರತಿವಾದಿಗಳಿಗೆ ಸತ್ಯಾಂಶಗಳು ಗೊತ್ತಿದ್ದರೂ ಸಹ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಇರುವ ವಾದಿಗಳ ಹಿಸ್ಸೆಯನ್ನು ತಪ್ಪಿಸುವ ಸಲುವಾಗಿ ದುರುದ್ದೇಶದಿಂದ ಕ್ರಯಪತ್ರವನ್ನು ಹಾಗೂ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: